# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು- 572 103.

**ದಿನಾಂಕ: 18.09.2026 ರಂದು ಸಮಯ ಬೆಳಿಗ್ಗೆ: 11.30 ಗಂಟೆಗೆ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ ಆವರಣ, ಬಿ.ಹೆಚ್.ರಸ್ತೆ, ತುಮಕೂರು-572103 ಇಲ್ಲಿ ನಡೆದ 2026-27ನೇ ಸಾಲಿನ ಎರಡನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳು.**

**ಹಾಜರಾದ ಸದಸ್ಯರುಗಳು**

| | | |
|---|---|---|
| **1.** | **ಪ್ರೊ. ನಾಗಭೂಷಣ ಹೆಚ್**<br>ಮಾನ್ಯ ಕುಲಪತಿಗಳು (ಪ್ರ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಅಧ್ಯಕ್ಷರು** |
| **2.** | **ಶ್ರೀ ತಿಪ್ಪೇಸ್ವಾಮಿ ಹೆಚ್.**<br>S/o ಹನುಮಂತಪ್ಪ, ನಿವೃತ್ತ ಪ್ರಾಂಶುಪಾಲರು, ಆರ್.ಬಿ.ಎನ್. ಸ್ಕೂಲ್ ರಸ್ತೆ, ವೇದಾವತಿ ನಗರ, ಹಿರಿಯೂರು ಪಟ್ಟಣ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. | **ಸದಸ್ಯರು** |
| **3.** | **ಪ್ರೊ. ನಾಗಭೂಷಣ ಹೆಚ್.**<br>ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯರು** |
| **4.** | **ಶ್ರೀ. ವೀರಣ್ಣ. ಎಸ್.ಸಿ**<br>ಪ್ರಾಂಶುಪಾಲರು, ಬಿ.ಎಂ.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಳಿಯಾರು, ತುಮಕೂರು ಜಿಲ್ಲೆ-572218 | **ಸದಸ್ಯರು** |
| **5.** | **ಪ್ರೊ ಕುಮಾರ್ ಕೆ.ಎಸ್**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ, ತುಮಕೂರು ಜಿಲ್ಲೆ. | **ಸದಸ್ಯರು** |
| **6.** | **ಡಾ. ಜ್ಯೋತಿ ಎಂ.ಜಿ.,**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕನಾಯಕನಹಳ್ಳಿ, ತುಮಕೂರು ಜಿಲ್ಲೆ-572214. | **ಸದಸ್ಯರು** |
| **7.** | **ಡಾ. ಪುಟ್ಟರಾಜು ಆರ್.**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿ.ಎಸ್. ಪುರ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ-572213. | **ಸದಸ್ಯರು** |
| **8.** | **ಶ್ರೀಮತಿ ಪ್ರಿಯದರ್ಶಿನಿ. ಆರ್.**<br>ಕೋ. ಬಿ. ಸೋಮಶೇಖರ್, ಶ್ರೀನಿಧಿ ಕೃಪ, ಕೆಸರಮಡು ಗ್ರಾಮ ಮತ್ತು ಅಂಚೆ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ. | **ಸದಸ್ಯರು** |
| **9.** | **ಶ್ರೀ ಹೆಚ್.ಎಸ್. ಅಶೋಕ**<br>ಬಿನ್. ಲೇಟ್ ಎಂ. ಸಿದ್ದಯ್ಯ, ಹೊಸಕೋಟೆ ಗ್ರಾಮ ಮತ್ತು ಅಂಚೆ, ಚಿಕ್ಕಯ್ಯನ ಛತ್ರ ಹೋಬಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ. | **ಸದಸ್ಯರು** |
| **10.** | **ಡಾ. ಫರ್‌ಹಾನಾ ಬೇಗಂ**<br>ಫರ್ಹಾ ನರ್ಸಿಂಗ್ ಹೋಂ, 4ನೇ ಕ್ರಾಸ್, ಈದ್ಗಾ ಮೊಹಲ್ಲಾ, ತುಮಕೂರು. | **ಸದಸ್ಯರು** |
| **11.** | **ಶ್ರೀ ಶಿವಣ್ಣ ಎಂ.ಜಿ.,**<br>ಬಿನ್ ಲೇಟ್ ಜಂಪಣ್ಣ ಎಂ. ಗೊಲ್ಲರಹಟ್ಟಿ, ಎಲ್.ಪುರ ಪೋಸ್ಟ್, ಮಿಡಿಗೇಶಿ ಹೋಬಳಿ, ಮಧುಗಿರಿ-572133. | **ಸದಸ್ಯರು** |
| **12.** | **ಶ್ರೀ ಮನೋಜ್ ಹೆಚ್.ಆರ್.**<br>ನಂ.76/1, 2ನೇ ಮೇನ್, ಪಿ.ಜೆ. ಎಕ್ಸ್‌ಟೆನ್ಷನ್, ದಾವಣಗೆರೆ | **ಸದಸ್ಯರು** |

| | | |
|---|---|---|
| 13. | **ಡಾ. ಎಂ.ಎಸ್ ಪ್ರಕಾಶ್.**<br>ನಂ.172, 7ನೇ ಮುಖ್ಯರಸ್ತೆ, 2ನೇ ಬ್ಲಾಕ್, ಜಯನಗರ, ಬೆಂಗಳೂರು. | ಸದಸ್ಯರು |
| 14. | **ಪ್ರೊ. ಜಿ. ಸುದರ್ಶನ ರೆಡ್ಡಿ,**<br>ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು, | ಸದಸ್ಯರು |
| 15. | **ಡಾ. ಮೋಹನ ಹೆಚ್.ಎಸ್**<br>ಕುಲಸಚಿವರು (ಮೌಲ್ಯಮಾಪನ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಸದಸ್ಯರು |
| 16. | **ಶ್ರೀಮತಿ ನಾಹಿದಾ ಜ಼ಮ್ ಜ಼ಮ್** ಕೆ.ಎ.ಎಸ್.,<br>ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಸದಸ್ಯ ಕಾರ್ಯದರ್ಶಿ |
| 17. | **ಹಣಕಾಸು ಅಧಿಕಾರಿಗಳು,** ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ವಿಶೇಷ ಆಹ್ವಾನಿತರು |

**<u>ಹಾಜರಾಗದ ಸದಸ್ಯರು</u>**

| | | |
|---|---|---|
| 1. | **ಕಾಲೇಜು ಶಿಕ್ಷಣ ಕಮೀಷನರ್** ಅಥವಾ ಜಂಟಿ ನಿರ್ದೇಶಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವನ ನಾಮನಿರ್ದೇಶಿತ; | ಸದಸ್ಯರು |
| 2. | **ತಾಂತ್ರಿಕ ಶಿಕ್ಷಣ ನಿರ್ದೇಶಕ ಅಥವಾ** ಜಂಟಿ ನಿರ್ದೇಶಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವನ ನಾಮನಿರ್ದೇಶಿತ; | ಸದಸ್ಯರು |
| 3. | **ವೈದ್ಯಕೀಯ ಶಿಕ್ಷಣ ನಿರ್ದೇಶಕರು ಅಥವಾ** ಜಂಟಿ ನಿರ್ದೇಶಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವನ ನಾಮನಿರ್ದೇಶಿತ; | ಸದಸ್ಯರು |
| 4. | **ಸಾರ್ವಜನಿಕ ಶಿಕ್ಷಣದ ಆಯುಕ್ತರು ಅಥವಾ** ಜಂಟಿ ನಿರ್ದೇಶಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವನ ನಾಮನಿರ್ದೇಶಿತ; | ಸದಸ್ಯರು |
| 5. | **ಪದವಿಪೂರ್ವ ಶಿಕ್ಷಣದ ನಿರ್ದೇಶಕರು ಅಥವಾ** ಜಂಟಿ ನಿರ್ದೇಶಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವನ ನಾಮನಿರ್ದೇಶಿತ; | ಸದಸ್ಯರು |

**<u>ಪ್ರಸ್ತಾವನೆ:</u>**

ದಿನಾಂಕ:18.09.2026ರ ಶುಕ್ರವಾರ ಸಮಯ ಬೆಳಿಗ್ಗೆ 11:30 ಗಂಟೆಗೆ ತುಮಕೂರು ವಿಶ್ವವಿದ್ಯಾನಿಲಯದ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣ, ಬಿ.ಹೆಚ್. ರಸ್ತೆ, ತುಮಕೂರು ಇಲ್ಲಿ ನಡೆದ 2026-27ನೇ ಸಾಲಿನ ಎರಡನೇ ಸಾಮಾನ್ಯ ಸಿಂಡಿಕೇಟ್ ಸಭೆಗೆ ಜೇಷ್ಠತೆ ಮತ್ತು ಸರದಿ ಆಧಾರದ ಮೇಲೆ ಮಾನ್ಯ ಪ್ರಾಂಶುಪಾಲರ ಕೋಟಾದಡಿಯಲ್ಲಿ ಕುಲಪತಿಯವರಿಂದ ನಾಮನಿರ್ದೇಶನಗೊಂಡಿರುವ ಡಾ. ಪುಟ್ಟರಾಜು ಆರ್., ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿ.ಎಸ್. ಪುರ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ ಇವರನ್ನು ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ಎಲ್ಲಾ ಸದಸ್ಯರುಗಳನ್ನು ಶ್ರೀಮತಿ ನಾಹಿದಾ ಜ಼ಮ್ ಜ಼ಮ್ ಕೆ.ಎ.ಎಸ್., ಮಾನ್ಯ ಕುಲಸಚಿವರು ಇವರು ಆತ್ಮೀಯವಾಗಿ ಸ್ವಾಗತಿಸಿದರು ಮತ್ತು ಈ ಕೆಳಕಂಡ ಕಾರ್ಯಸೂಚಿಯನ್ನು ಸಭೆಗೆ ಮಂಡಿಸಿದರು.

<table>
<tr><th>ಕ್ರ ಸಂ.</th><th>ವಿಷಯ ಸಂಖ್ಯೆ</th><th>ಕಾರ್ಯಸೂಚಿ ವಿಷಯಗಳು</th></tr>
<tr><td colspan="3">ದಿನಾಂಕ:30.06.2026 ರಂದು ನಡೆದ ಪ್ರಥಮ ಸಾಮಾನ್ಯ ಸಿಂಡಿಕೇಟ್ ಸಭೆ, ದಿನಾಂಕ:03.07.2026ರಂದು ನಡೆದ ಪ್ರಥಮ ಸಾಮಾನ್ಯ ಸಿಂಡಿಕೇಟ್ ಸಭೆಯ ಮುಂದುವರೆದ ಭಾಗದ ಸಭೆ ಮತ್ತು ದಿನಾಂಕ:18.07.2026ರಂದು ನಡೆದ ಪ್ರಥಮ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯ ದೃಢೀಕರಿಸಲಾಯಿತು.</td></tr>
<tr><td colspan="3">ಶೈಕ್ಷಣಿಕ ವಿಭಾಗ</td></tr>
<tr><td>1.</td><td>2026–27:ಸಾ.ಸಿಂ–02 ಶೈ.ವಿ–01</td><td>ಸ್ನಾತಕೋತ್ತರ ವಿದ್ಯುನ್ಮಾನ ವಿಭಾಗ, PG Diploma in Embedded System and Design ಮತ್ತು PG Diploma in Internet of Things ಕೋರ್ಸ್‌ನ್ನು ಪ್ರಾರಂಭಿಸುವ ಕುರಿತು.</td></tr>
<tr><td></td><td colspan="2"><u>ನಿರ್ಣಯ:</u><br>ಸ್ನಾತಕೋತ್ತರ ವಿದ್ಯುನ್ಮಾನ ವಿಭಾಗ, PG Diploma in Embedded System and Design ಮತ್ತು PG Diploma in Internet of Things ಕೋರ್ಸ್‌ಗಳನ್ನು ಪ್ರಾರಂಭಿಸುವ ಕುರಿತು ಚರ್ಚಿಸಿದ ಸಭೆಯು ಈ ಸಂಬಂಧ, ಸದರಿ ಕೋರ್ಸುಗಳ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮೂರು ಜನ ತಜ್ಞರ ಸಮಿತಿಯನ್ನು ರಚಿಸಿ, ಪ್ರಸ್ತುತ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಪಠ್ಯಕ್ರಮವನ್ನು ರಚಿಸಿ ಮತ್ತು ಕೋರ್ಸಿನ ಪದನಾಮವನ್ನು ಮಾರ್ಪಡಿಸಲು ಅನುಮೋದನೆಯಾಗಿರುವ ವಿಚಾರವನ್ನು ಮಾನ್ಯ ಕುಲಸಚಿವರು ಸಿಂಡಿಕೇಟ್ ಸಭೆಯ ಗಮನಕ್ಕೆ ತಂದರು. ಈ ಸಂಬಂಧ, ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಶಿವಣ್ಣ ಎಂ.ಜೆ. ರವರು ಸೆಲ್ಫ್ ಫೈನಾನ್ಸ್ ಕೋರ್ಸುಗಳನ್ನು ಪ್ರಾರಂಭಿಸಲು ಬೇಡ ಎಂದು ಸಭೆಗೆ ತಿಳಿಸಿದರು. ಈ ಸಂಬಂಧ, ಮಾನ್ಯ ಕುಲಪತಿಗಳು ಹೊಸ ಕೋರ್ಸುಗಳನ್ನು ಪ್ರಾರಭಿಸಿದರೆ, ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಅನುಕೂಲವಾಗುವುದಾಗಿ ಸಭೆಗೆ ತಿಳಿಸಿದರು.<br>ಈ ಸಂಬಂಧ, ಶ್ರೀ ಶಿವಣ್ಣ ಎಂ.ಜೆ. ರವರು ಮಾತನಾಡಿ, ಸೆಲ್ಫ್ ಫೈನಾನ್ಸ್ ಅಡಿಯಲ್ಲಿ ಈಗಾಗಲೇ ಪ್ರಾರಂಭಿಸಲಾಗಿರುವ ಎಲ್.ಎಲ್.ಎಂ. ಕೊರ್ಸ್‌ನ್ನು ವ್ಯಾಸಂಗ ಮಾಡಿದ ನಂತರ ಸದರಿ ಕೋರ್ಸಿಗೆ ಬಾರ್ ಕೌನ್ಸಿಲ್‌ನಲ್ಲಿ ಮತ್ತು ರಾಜ್ಯ ಸರ್ಕಾರದಲ್ಲಿ ಅನುಮತಿ ದೊರೆಯುವುದಿಲ್ಲವೆಂದು ತಿಳಿಸಿದರು ಹಾಗೂ ವಿಶ್ವವಿದ್ಯಾನಿಲಯವು ಯಾವುದೇ ಸೆಲ್ಫ್ ಫೈನಾನ್ಸ್ ಅಡಿಯಲ್ಲಿ ಕೋರ್ಸನ್ನು ಪ್ರಾರಂಭಿಸಲು ನನ್ನ ಸಹಮತವಿರುವುದಿಲ್ಲ. ಸರ್ಕಾರದ ಅನುಮತಿ ಪಡೆದು, ಕೋರ್ಸುಗಳನ್ನು ಪ್ರಾರಂಭಿಸುವುದು ಸೂಕ್ತವೆಂದು ಸಭೆಗೆ ತಿಳಿಸಿದರು. ಈ ಸಂಬಂಧ, ಮಾನ್ಯ ಕುಲಸಚಿವರು ಹೊಸ ಕೋರ್ಸುಗಳ ಪ್ರಾರಂಭದ ಸಂಬಂಧ, ಪರಿನಿಯಮಾವಳಿಗಳನ್ನು ರಚಿಸಿ, ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮತಿ ಪಡೆದ ನಂತರ ಪ್ರಾರಂಭಿಸುವುದಾಗಿ ಸಭೆಗೆ ತಿಳಿಸಿದರು.<br>ಶ್ರೀ ಮನೋಜ್ ರವರು ಮಾತನಾಡಿ, ಈ ರೀತಿಯ ಉದ್ಯೋಗಾಧಾರಿತ ಕೋರ್ಸುಗಳನ್ನು ನಿಯಮಾನುಸಾರ ಕ್ರಮವಹಿಸಿ, ಪ್ರಾರಂಭಿಸುವುದು ಸೂಕ್ತವಾಗಿರುತ್ತದೆ ಮತ್ತು ಹೆಮ್ಮೆಯ ವಿಚಾರವಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.<br>ಸದರಿ ವಿಷಯವಾಗಿ ಡಾ. ಸುದರ್ಶನ ರೆಡ್ಡಿ ಜಿ., ಹಿರಿಯ ಪ್ರಾಧ್ಯಾಪಕರು ರವರು ಮಾತನಾಡಿ, ಸದರಿ ಕೋರ್ಸುಗಳನ್ನು ಪ್ರಾರಂಭಿಸುವ ಮುಂಚಿತವಾಗಿ ಕೋರ್ಸಿನ ವಿನಿಯಮ ಮತ್ತು ಪಠ್ಯಕ್ರಮವನ್ನು ವಿದ್ಯಾರ್ಥಿಗಳ ಭವಿಷ್ಯಕ್ಕೆ ಅನುಕೂಲಕರವಾಗುವ ರೀತಿಯಲ್ಲಿ ರಚಿಸಿ, ಮುಂದಿನ ಕ್ರಮ ಕೈಗೊಳ್ಳಬಹುದಾಗಿದೆ ಎಂದು ಸಭೆಗೆ ತಿಳಿಸಿದರು.<br><br>ಈ ಸಂಬಂಧ, ಕೂಲಂಕಷವಾಗಿ ಚರ್ಚಿಸಿದ ಸಭೆಯು ಮೇಲ್ಕಂಡ ಕೋರ್ಸುಗಳ ಪ್ರಾರಂಭದ ಕುರಿತು, ಯಾವುದೇ ನಿಯಮಬಾಹಿರವಾಗದಂತೆ, ನಿಯಮಾನುಸಾರ ಕ್ರಮವಹಿಸಲು ಸರ್ವಾನುಮತದಿಂದ ಸಭೆಯು ಅನುಮೋದಿಸಿತು.</td></tr>
<tr><td>2.</td><td>2026–27:ಸಾ.ಸಿಂ–02 ಶೈ.ವಿ–02</td><td>ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ ವಿಷಯದ ಪರಿಷ್ಕೃತ ಪಠ್ಯಕ್ರಮವನ್ನು ಅಳವಡಿಸಿಕೊಳ್ಳುವ ಸಂಬಂಧ ಅಧಿಸೂಚಿಸಲಾಗಿರುವ ಕ್ರಮದ ಅನುಮೋದನೆ ಕುರಿತು.</td></tr>
<tr><td></td><td colspan="2"><u>ನಿರ್ಣಯ:</u><br>ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ ವಿಷಯದ ಪರಿಷ್ಕೃತ ಪಠ್ಯಕ್ರಮವನ್ನು ಅಳವಡಿಸಿಕೊಳ್ಳುವ ಸಂಬಂಧ ವಿಶ್ವವಿದ್ಯಾನಿಲಯವು ದಿನಾಂಕ:24.08.2026 ರಂದು ಸದರಿ ವಿಷಯದ ಪರಿಷ್ಕೃತ ಪಠ್ಯಕ್ರಮವನ್ನು ಅಧಿಸೂಚಿಸಲಾಗಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.</td></tr>
</table>

| | | |
|---|---|---|
| 3. | **2026–27:ಸಾ.ಸಿಂ–02 ಶೈ.ವಿ–03** | **2026–27ನೇ ಶೈಕ್ಷಣಿಕ ಸಾಲಿಗೆ ರಾಜ್ಯ ಶಿಕ್ಷಣ ನೀತಿ ಅನ್ವಯದಂತೆ ವಿವಿಧ ವಿಷಯಗಳ ಅಧ್ಯಯನ ಮಂಡಳಿಗಳು ಸಲ್ಲಿಸಿರುವ ಪಠ್ಯಕ್ರಮಗಳನ್ನು ವಿಶ್ವವಿದ್ಯಾನಿಲಯ ಅಳವಡಿಸಿಕೊಂಡಿರುವ ಕ್ರಮವನ್ನು ಮತ್ತು ಪಠ್ಯಕ್ರಮಗಳನ್ನು ಅನುಮೋದಿಸುವ ಕುರಿತು.** |
| | ನಿರ್ಣಯ: ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, 2026–27ನೇ ಶೈಕ್ಷಣಿಕ ಸಾಲಿಗೆ ರಾಜ್ಯ ಶಿಕ್ಷಣ ನೀತಿ ಅನ್ವಯದಂತೆ ವಿವಿಧ ವಿಷಯಗಳ ಅಧ್ಯಯನ ಮಂಡಳಿಗಳು ಸಲ್ಲಿಸಿರುವ ಐದು ಮತ್ತು ಆರನೇ ಸೆಮಿಸ್ಟರ್ ಪಠ್ಯಕ್ರಮಗಳನ್ನು ಮತ್ತು 2025–26ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಪ್ರಾರಂಭಿಸಲಾಗಿರುವ ಸ್ನಾತಕ ವಾಣಿಜ್ಯಶಾಸ್ತ್ರ (B.Com AEDP Courses) ಪದವಿಗಳ ಮೂರು ಮತ್ತು ನಾಲ್ಕನೇ ಸೆಮಿಸ್ಟರ್‌ಗಳ ಪಠ್ಯಕ್ರಮಗಳನ್ನು ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. | |
| 4. | **2026–27:ಸಾ.ಸಿಂ–02 ಶೈ.ವಿ–04** | **2026–27ನೇ ಸಾಲಿನ ಪ್ರಥಮ ವರ್ಷದ LibJrPsy ಮತ್ತು HEJ ಕೋರ್ಸುಗಳ ಪ್ರವೇಶಾತಿ ಕುರಿತು.** |
| | ನಿರ್ಣಯ: ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, 2026–27ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗೆ ಸಂಬಂಧಿಸಿದಂತೆ, LibJrPsy (Library Science, Journalism, Psychology) ಕೋರ್ಸಿಗೆ 12 ವಿದ್ಯಾರ್ಥಿಗಳ ಪ್ರವೇಶಾತಿಯಾಗಿರುವುದರಿಂದ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, 2026–27ನೇ ಸಾಲಿಗೆ ಸದರಿ ಕೋರ್ಸನ್ನು ಮುಂದುವರೆಸಲು ಹಾಗೂ ಸ್ನಾತಕ HEJ ಕೋರ್ಸಿಗೆ, ಕೇವಲ 01 ವಿದ್ಯಾರ್ಥಿಯು ಪ್ರವೇಶಾತಿಯು ಆಗಿರುವ ಹಿನ್ನೆಲೆಯಲ್ಲಿ ಸದರಿ 01 ಪ್ರವೇಶಾತಿಯನ್ನು ರದ್ದುಗೊಳಿಸುವ ಸಂಬಂಧ, ದಿನಾಂಕ:24.08.2026 ರಂದು ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. | |
| 5. | **2026–27:ಸಾ.ಸಿಂ–02 ಶೈ.ವಿ–05** | **ಸ್ನಾತಕ ಪದವಿ 5 ಮತ್ತು 6ನೇ ಸೆಮಿಸ್ಟರ್ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರ ವಿಷಯಗಳ ಪಠ್ಯಕ್ರಮವನ್ನು ಅನುಮೋದನೆ ಕುರಿತು.** |
| | ನಿರ್ಣಯ: ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, 2026–27ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ ಪದವಿಯ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರ ವಿಷಯಗಳ 5 ಮತ್ತು 6ನೇ ಸೆಮಿಸ್ಟರ್‌ನ DSC ಯಲ್ಲಿ ಆಯ್ಕೆ ಪತ್ರಿಕೆಗಳನ್ನು ಅಳವಡಿಸಿಕೊಂಡು, ಅದರಂತೆ ತರಗತಿಗಳನ್ನು ಬೋಧನೆ ಮಾಡಿಕೊಂಡು, ವಿಶ್ವವಿದ್ಯಾನಿಲಯಕ್ಕೆ ಸದರಿ ವಿಷಯಗಳ ಪಠ್ಯಕ್ರಮವನ್ನು ಸಲ್ಲಿಸಿರುತ್ತಾರೆ. ಪ್ರೋಗ್ರಾಮ್ ವಿನ್ಯಾಸದನ್ವಯ DSC ಯಲ್ಲಿ ಆಯ್ಕೆ ಪತ್ರಿಕೆಗಳಿಗೆ ಅವಕಾಶವಿರದಿದ್ದರೂ ಅಧ್ಯಯನ ಮಂಡಳಿಗಳು ಅಳವಡಿಸಿಕೊಂಡು ತರಗತಿಗಳನ್ನು ನಡೆಸುತ್ತಿರುವುದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2026–27ನೇ ಶೈಕ್ಷಣಿಕ ಸಾಲಿಗೆ ಮಾತ್ರ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ದಿನಾಂಕ:28.08.2026 ರಂದು ವಿಶ್ವವಿದ್ಯಾನಿಲಯವು ಅಧಿಸೂಚನೆ ಹೊರಡಿಸಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br>ಮುಂದುವರೆದು, ಸ್ನಾತಕ 5 ಮತ್ತು 6ನೇ ಸೆಮಿಸ್ಟರ್‌ನ ಅರ್ಥಶಾಸ್ತ್ರ ವಿಷಯದ ಪಠ್ಯಕ್ರಮದ ಪರಿಷ್ಕರಣೆಗೆ ಶ್ರೀ ವೀರಣ್ಣ ಎಸ್.ಸಿ., ಮತ್ತು ಡಾ. ಕುಮಾರ್ ಕೆ.ಎಸ್., ಇವರು ಸಭೆಯ ಗಮನಕ್ಕೆ ತಂದರು. ಈ ಸಂಬಂಧ, ಚರ್ಚಿಸಿದ ಸಭೆಯು ಸರ್ಕಾರವು ನಿಗದಿಪಡಿಸಿರುವ ಪ್ರೋಗ್ರಾಮ್ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯಾಗದಂತೆ, 5 ಮತ್ತು 6ನೇ ಸೆಮಿಸ್ಟರ್‌ನಲ್ಲಿ core subject ನೊಂದಿಗೆ Specialization paper ಗಳನ್ನು Introduce ಮಾಡಲು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಇದೊಂದು ಶೈಕ್ಷಣಿಕ ವರ್ಷಕ್ಕೆ ಮಾತ್ರ ಅರ್ಥಶಾಸ್ತ್ರ ವಿಷಯದ ಪಠ್ಯಕ್ರಮವನ್ನು ಪರಿಷ್ಕರಿಸಲು ಹಾಗೂ ಸದರಿ ಪಠ್ಯಕ್ರಮದ ಪರಿಷ್ಕರಣೆಗೆ ಅಧ್ಯಯನ ಮಂಡಳಿಯ ಸಭೆ ಕರೆದು, ತುರ್ತಾಗಿ ಕ್ರಮವಹಿಸಲು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೀರ್ಮಾನಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು. ಈ ಸಂಬಂಧ, ಚರ್ಚಿಸಿದ ಸಿಂಡಿಕೇಟ್ ಸಭೆಯು 2026–27ನೇ ಶೈಕ್ಷಣಿಕ ಸಾಲಿನ 5 ಮತ್ತು 6ನೇ ಸೆಮಿಸ್ಟರ್‌ನ ಅರ್ಥಶಾಸ್ತ್ರ ವಿಷಯದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ವಿದ್ಯಾವಿಷಯಕ ಪರಿಷತ್ ಶಿಫಾರಸ್ಸಿನಂತೆ ಮುಂದಿನ ಕ್ರಮ ಕೈಗೊಳ್ಳಲು ಸಭೆಯು | |

| | | |
|---|---|---|
| | | ತೀರ್ಮಾನಿಸಿತು.<br>ಇನ್ನು ಮುಂದೆ ಸ್ನಾತಕ ಪದವಿಯ ಅಧ್ಯಯನ ಮಂಡಳಿಗಳನ್ನು ಸ್ನಾತಕೋತ್ತರ ವಿಭಾಗದ ಒಬ್ಬರು ಪ್ರಾಧ್ಯಾಪಕರು ಅಧ್ಯಕ್ಷರು, ವಿಶ್ವವಿದ್ಯಾನಿಲಯದ ಸ್ನಾತಕ ಪದವಿಯ ಅಧ್ಯಾಪಕರುಗಳು 04 ಜನ ಸದಸ್ಯರು (ಗರಿಷ್ಟ ಪ್ರಮಾಣ), ಅನ್ಯ ವಿಶ್ವವಿದ್ಯಾನಿಲಯದ ಒಬ್ಬ ಪ್ರಾಧ್ಯಾಪಕರನ್ನು ಒಳಗೊಂಡಂತೆ ರಚಿಸಲು ವಿದ್ಯಾವಿಷಯಕ ಪರಷತ್ತಿನಲ್ಲಿ ತೀರ್ಮಾನವಾಗಿರುವ ವಿಚಾರದ ಕುರಿತಾಗಿ ಚರ್ಚಿಸಿದ ಸಿಂಡಿಕೇಟ್ ಸಭೆಯು ವಿದ್ಯಾವಿಷಯಕ ಪರಷತ್ತಿನ ಶಿಫಾರಸ್ಸನ್ನು ಅನುಮೋದಿಸಿತು. |
| | | **ಸಾಮಾನ್ಯ ವಿಭಾಗ** |
| 6. | **2026–27:ಸಾ.ಸಿಂ–02<br>ಸಾ.ವಿ–01** | **ತುಮಕೂರು ವಿಶ್ವವಿದ್ಯಾನಿಲಯದ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕ್ಲರ್ಕ್ ಕಂ ಟೈಪಿಸ್ಟ್ (ತಾತ್ಕಾಲಿಕ) ಇವರ ಸೇವೆಯನ್ನು ಮುಂದುವರೆಸುವ ಕುರಿತು.** |
| | | <u>ನಿರ್ಣಯ:</u><br>ತುಮಕೂರು ವಿಶ್ವವಿದ್ಯಾನಿಲಯದ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕ್ಲರ್ಕ್ ಕಂ ಟೈಪಿಸ್ಟ್ (ತಾತ್ಕಾಲಿಕ) ಆದ ಶ್ರೀಮತಿ ಗಾಯಿತ್ರಿ ಎನ್.ಜಿ., ಇವರ ಸೇವೆಯನ್ನು ಮುಂದುವರೆಸುವ ಕುರಿತು ಚರ್ಚಿಸಿದ ಸಭೆಯು, ಸದರಿಯವರ 11 ತಿಂಗಳ ಸೇವಾ ಅವಧಿಯು ದಿನಾಂಕ:08.08.2026 ರಂದು ಮುಕ್ತಾಯಗೊಂಡಿರುತ್ತದೆ.<br>ಈ ಸಂಬಂಧ, ದಿನಾಂಕ: 09.08.2026 ರಂದು ಸಾರ್ವತ್ರಿಕ ರಜಾ ದಿನವಾಗಿದ್ದು, ದಿನಾಂಕ:10.08.2026 ಅನ್ನು ಬ್ರೇಕ್‌ಡೇ ಎಂದು ಪರಿಗಣಿಸಿ, ದಿನಾಂಕ:11.08.2026 ರಿಂದ 11 ತಿಂಗಳ ಅವಧಿಗೆ ಅನ್ವಯವಾಗುವಂತೆ ಪ್ರಸ್ತುತ ಚಾಲ್ತಿಯಲ್ಲಿರುವ ಸಂಭಾವನೆಯೊಂದಿಗೆ ಸದರಿಯವರ ಸೇವೆಯನ್ನು ಮುಂದುವರೆಸಲು ಸಭೆಯು ಅನುಮೋದಿಸಿತು. |
| | | **ಅಭಿವೃದ್ಧಿ ವಿಭಾಗ** |
| 7. | **2026–27:ಸಾ.ಸಿಂ–02<br>ಅ.ವಿ–01** | **ತುಮಕೂರು ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳ ನೇಮಕಾತಿಗೆ ಸಂಬಂಧಿಸಿದ ಮೆ. ಎನ್.ಆರ್.ಬ್ರಾಂಡ್ ವೇವ್, ಬೆಂಗಳೂರು ಇವರ ಜಾಹೀರಾತು ವೆಚ್ಚ ರೂ.8,17,238/–ಗಳನ್ನು ಪಾವತಿಸಿರುವ ಕುರಿತು.** |
| | | <u>ನಿರ್ಣಯ:</u><br>ತುಮಕೂರು ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳ ನೇಮಕಾತಿಗೆ ಸಂಬಂಧಿಸಿದ ಮೆ. ಎನ್.ಆರ್.ಬ್ರಾಂಡ್ ವೇವ್, ಬೆಂಗಳೂರು ಇವರಿಗೆ ಸರ್ಕಾರದ ಪತ್ರ ಸಂಖ್ಯೆ: ಇಡಿ 24 ಯುಟಿಟಿ 2026, ದಿನಾಂಕ: 16.07.2026ರ ಸೂಚನೆಯಂತೆ ಜಾಹೀರಾತು ಪ್ರಕಟಣೆ ಹೊರಡಿಸಿರುವ ವೆಚ್ಚ ರೂ. 8,17,238/– (ಎಂಟು ಲಕ್ಷದ ಹದಿನೇಳು ಸಾವಿರದ ಎರಡುನೂರ ಮೂವತ್ತೆಂಟು ರೂಪಾಯಿಗಳು ಮಾತ್ರ) ಗಳನ್ನು ಪಾವತಿಸುವ ಸಂಬಂಧ, ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಶಿವಣ್ಣ ಎಂ.ಜೆ. ಮತ್ತು ಶ್ರೀ ಮನೋಜ್ ಹೆಚ್.ಆರ್. ರವರು ಸದರಿ ಜಾಹಿರಾತು ಪ್ರಕಟಣೆಯ ವೆಚ್ಚ ಹೆಚ್ಚಾಗಿದ್ದು, ಸಿಂಡಿಕೇಟ್ ಅನುಮೋದನೆ ಇಲ್ಲದೇ ಸದರಿ ಬಿಲ್ಲನ್ನು ಪಾವತಿಸಿರುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಸಂಬಂಧ, ಮಾನ್ಯ ಹಣಕಾಸು ಅಧಿಕಾರಿಗಳು, ವಿಶ್ವವಿದ್ಯಾನಿಲಯದ ಆದೇಶದ ಅನುಗುಣವಾಗಿ ಕ್ರಮವಹಿಸಿರುವುದಾಗಿ ಸಭೆಗೆ ತಿಳಿಸಿದರು ಹಾಗೂ ಸದರಿ ಬಿಲ್ ಮೊತ್ತವು ಜಾಹಿರಾತುದಾರರಿಗೆ ಪಾವತಿಯಾಗಿರುವುದಿಲ್ಲವೆಂದು ಸಭೆಗೆ ಗಮನಕ್ಕೆ ತಂದರು.<br>ಈ ಹಿನ್ನೆಲೆಯಲ್ಲಿ ಚರ್ಚಿಸಿದ ಸಭೆಯು ವಿಶ್ವವಿದ್ಯಾನಿಲಯದ ಆರ್ಥಿಕ ಸ್ಥಿತಿಗತಿಯನ್ನು ಗಮನದಲ್ಲಿಟ್ಟುಕೊಂಡು ಕುಲಪತಿಯವರ ನೇಮಕಾತಿ ಅಧಿಸೂಚನೆಯ ಜಾಹೀರಾತಿನ ಬಿಲ್ಲಿನ ಮೊತ್ತವನ್ನು ಸರ್ಕಾರದ ವತಿಯಿಂದ ಪಾವತಿಸಲು ಮನವಿಯನ್ನು ಸಲ್ಲಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.<br>ಈ ಸಂಬಂಧ, ಮಾನ್ಯ ಕುಲಸಚಿವರು, ಸದರಿ ಬಿಲ್ಲನ್ನು ಪಾವತಿ ಮಾಡದಿದ್ದಲ್ಲಿ ಶೇಕಡ 10% ಹೆಚ್ಚಳದೊಂದಿಗೆ ಪಾವತಿ ಮಾಡಬೇಕಿರುತ್ತದೆ ಎಂದು ಸಭೆಗೆ ತಿಳಿಸಿದರು. ಈ ಸಂಬಂಧ, ಕೂಲಂಕಷವಾಗಿ ಚರ್ಚಿಸಿದ ಸಭೆಯು ಪ್ರಸ್ತುತ ಜಾಹೀರಾತು ಪ್ರಕಟಣೆ ಹೊರಡಿಸಿರುವ ವೆಚ್ಚ ರೂ.8,17,238/– (ಎಂಟು ಲಕ್ಷದ ಹದಿನೇಳು ಸಾವಿರದ ಎರಡುನೂರ ಮೂವತ್ತೆಂಟು ರೂಪಾಯಿಗಳು ಮಾತ್ರ)ಗಳನ್ನು ಸರ್ಕಾರದಿಂದ ಮರುಭರಿಕೆಯಾಗುವ ಪರಿಷ್ಕೃತ ಆದೇಶ ಸ್ವೀಕೃತವಾಗುವ ಷರತ್ತಿಗೊಳಪಟ್ಟು ಜಾಹೀರಾತುದಾರರಿಗೆ ಸದರಿ ಮೊತ್ತವನ್ನು ಪಾವತಿಸಲು ಸಭೆಯು ಅನುಮೋದಿಸಿತು. |

| | | |
|---|---|---|
| | **ಸಿಬ್ಬಂದಿ ವಿಭಾಗ** | |
| 8. | **2026–27:ಸಾ.ಸಿಂ–02 ಸಿ.ವಿ–01** | **ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ತಿಪ್ಪೇಶ್ ಹೆಚ್, ದ್ವಿತೀಯ ದರ್ಜೆ ಸಹಾಯಕರು ಇವರ ಸೇವೆಯನ್ನು ಮುಂದುವರೆಸುವ ಕುರಿತು.** |
| | <u>ನಿರ್ಣಯ:</u> ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದಲ್ಲಿ ಹಂಗಾಮಿ ಸಂಚಿತ ವೇತನ ನೌಕರರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ತಿಪ್ಪೇಶ್ ಹೆಚ್. ದ್ವಿತೀಯ ದಜೆ ಸಹಾಯಕರು, ಇವರ ಸೇವೆಯನ್ನು ಮುಂದುವರೆಸುವ ಕುರಿತು ಚರ್ಚಿಸಿದ ಸಭೆಯು, ಸದರಿಯವರ 11 ತಿಂಗಳ ಸೇವಾ ಅವಧಿಯು ದಿನಾಂಕ:10.08.2026 ರಂದು ಮುಕ್ತಾಯಗೊಂಡಿರುತ್ತದೆ. ಈ ಸಂಬಂಧ, ದಿನಾಂಕ 11.08.2026 ಅನ್ನು ಬ್ರೇಕ್‌ಡೇ ಎಂದು ಪರಿಗಣಿಸಿ, ದಿನಾಂಕ: 12.08.2026 ರಿಂದ 11 ತಿಂಗಳ ಅವಧಿಗೆ ಅನ್ವಯವಾಗುವಂತೆ ಸದರಿಯವರ ಸೇವೆಯನ್ನು ಮುಂದುವರೆಸಲು ಸಭೆಯು ಅನುಮೋದಿಸಿತು. | |
| 9. | **2026–27:ಸಾ.ಸಿಂ–02 ಸಿ.ವಿ–02** | **ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗ ಮತ್ತು ಘಟಕ ಕಾಲೇಜುಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಿವಿಧ ವೃಂದದ ಅಧ್ಯಾಪಕರು/ಇತರೆ ಶೈಕ್ಷಣಿಕ ಸಿಬ್ಬಂದಿಗಳ ಅಂತಿಮ ಜೇಷ್ಠತಾ ಪಟ್ಟಿಯ ಪ್ರಕಟಣೆ ಬಗ್ಗೆ.** |
| | <u>ನಿರ್ಣಯ:</u> ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗ ಮತ್ತು ಘಟಕ ಕಾಲೇಜುಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಿವಿಧ ವೃಂದದ ಅಧ್ಯಾಪಕರು/ಇತರೆ ಶೈಕ್ಷಣಿಕ ಸಿಬ್ಬಂದಿಗಳ ಅಂತಿಮ ಜೇಷ್ಠತಾ ಪಟ್ಟಿಯ ಪ್ರಕಟಣೆ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಅಕ್ಷೇಪಣೆ ಸಲ್ಲಿಸಿರುವ ಅಧ್ಯಾಪಕರುಗಳಿಗೆ ಹಿಂಬರಹವನ್ನು ನೀಡಿ, ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. | |
| 10. | **2026–27:ಸಾ.ಸಿಂ–02 ಸಿ.ವಿ–03** | **ಪ್ರೊ. ಶಿವಲಿಂಗಸ್ವಾಮಿ ಹೆಚ್.ಕೆ. ಅವರ ವಿಷಯದಲ್ಲಿ ಸಿಂಡಿಕೇಟ್ ಸಭೆಯು ತೆಗೆದುಕೊಂಡ ನಿರ್ಣಯದ ಬಗ್ಗೆ ಬೋಧಕ ಸಿಬ್ಬಂದಿಗಳು ಸಲ್ಲಿಸಿರುವ ಮನವಿಯ ಕುರಿತು.** |
| | <u>ನಿರ್ಣಯ:</u> ಪ್ರೊ. ಶಿವಲಿಂಗಸ್ವಾಮಿ ಹೆಚ್.ಕೆ. ಅವರ ವಿಷಯದಲ್ಲಿ ಸಿಂಡಿಕೇಟ್ ಸಭೆಯು ತೆಗೆದುಕೊಂಡ ನಿರ್ಣಯದ ಬಗ್ಗೆ ಬೋಧಕ ಸಿಬ್ಬಂದಿಗಳು ಸಲ್ಲಿಸಿರುವ ಮನವಿಯ ಕುರಿತು ಚರ್ಚಿಸಿದ ಸಭೆಯು ದಿನಾಂಕ:03.07.2026 ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಕ್ರಮವಹಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. | |
| 11. | **2026–27:ಸಾ.ಸಿಂ–02 ಸಿ.ವಿ–04** | **ಪ್ರೊ. ಶಿವಲಿಂಗಸ್ವಾಮಿ ಹೆಚ್.ಕೆ. ಇವರಿಗೆ ಸಂಬಂಧಿಸಿದಂತೆ ಸಿಂಡಿಕೇಟ್ ಸಭೆಯು ತೆಗೆದುಕೊಂಡ ನಿರ್ಣಯದ ಕುರಿತು.** |
| | <u>ನಿರ್ಣಯ:</u> ಪ್ರೊ. ಶಿವಲಿಂಗಸ್ವಾಮಿ ಹೆಚ್.ಕೆ. ಇವರಿಗೆ ಸಂಬಂಧಿಸಿದಂತೆ ಸಿಂಡಿಕೇಟ್ ಸಭೆಯು ತೆಗೆದುಕೊಂಡ ನಿರ್ಣಯದ ಕುರಿತು ಚರ್ಚಿಸಿದ ಸಭೆಯು ದಿನಾಂಕ:03.07.2026ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಕ್ರಮವಹಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. | |
| | **ಪರೀಕ್ಷಾ ವಿಭಾಗ** | |
| 12. | **2026–27:ಸಾ.ಸಿಂ–02 ಪ.ವಿ–01** | **ಪ್ರಶ್ನೆ ಪತ್ರಿಕೆಗಳ ಮುದ್ರಣದ ವೆಚ್ಚವನ್ನು ಪಾವತಿಸುವ ಕುರಿತು** |
| | <u>ನಿರ್ಣಯ:</u> 2026ರ ಮಾಚ್, ಏಪ್ರಿಲ್ ಮತ್ತು 2026ರ ಜೂನ್, ಜುಲೈ ಮಾಹೆಗಳಲ್ಲಿ ವಿವಿಧ ಸ್ನಾತಕ, ಸ್ನಾತಕೋತ್ತರ, ಸ್ನಾತಕ ಶಿಕ್ಷಣ ಪದವಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ಮುದ್ರಣ ಸಂಬಂಧ ಕರಾರು ಒಪ್ಪಂದದಂತೆ, ವೆಚ್ಚವಾಗಿರುವ ರೂ. 37,81,894.00 (ಮೂವತ್ತೇಳು ಲಕ್ಷದ ಎಂಭತ್ತೊಂದು ಸಾವಿರದ ಎಂಟುನೂರ ತೊಂಭತ್ತ ನಾಲ್ಕು ರೂಪಾಯಿಗಳು ಮಾತ್ರ) ಗಳನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ನಿಯಮಾನುಸಾರ ಪಾವತಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. | |

<table>
<tr><td>13.</td><td>2026–27:ಸಾ.ಸಿಂ–02<br>ಪ.ವಿ–02</td><td>2026ರ ಜೂನ್/ಜುಲೈ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ, ಸ್ನಾತಕ ಶಿಕ್ಷಣ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಅವಶ್ಯವಿರುವ ಉತ್ತರ ಪುಸ್ತಕಗಳನ್ನು ಸರಬರಾಜು ಪಡೆದಿರುವ ಹುಂಡಿಯ ಮೊತ್ತವನ್ನು ಪಾವತಿಸುವ ಕುರಿತು.</td></tr>
<tr><td></td><td colspan="2"><u>ನಿರ್ಣಯ:</u><br>2026ರ ಜೂನ್/ಜುಲೈ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ, ಸ್ನಾತಕ ಶಿಕ್ಷಣ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಅವಶ್ಯವಿರುವ ಉತ್ತರ ಪುಸ್ತಕಗಳನ್ನು M/s Bindiya Enterprises, Gujarat ಇವರಿಂದ ಸರಬರಾಜು ಪಡೆದಿರುವ ಹುಂಡಿಯ ಮೊತ್ತ ರೂ. 36,84,000/– (ಮೂವತ್ತಾರು ಲಕ್ಷದ ಎಂಬತ್ತ ನಾಲ್ಕು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.</td></tr>
<tr><td colspan="3" align="center">ಇಂಜಿನಿಯರಿಂಗ್ ವಿಭಾಗ</td></tr>
<tr><td>14.</td><td>2026–27:ಸಾ.ಸಿಂ–02<br>ಇ.ವಿ–01</td><td>ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ವೇತನ ಪರಿಷ್ಕರಣೆ ಸೌಲಭ್ಯವನ್ನು ಮಂಜೂರು ಮಾಡುವ ಕುರಿತು.</td></tr>
<tr><td></td><td colspan="2"><u>ನಿರ್ಣಯ:</u><br>ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ವೇತನ ಪರಿಷ್ಕರಣೆ ಸೌಲಭ್ಯವನ್ನು ಮಂಜೂರು ಮಾಡುವ ಕುರಿತು ಚರ್ಚಿಸಿದ ಸಭೆಯು ಸರ್ಕಾರದ ಆದೇಶಾನುಸಾರ ಕನಿಷ್ಠ ವೇತನವನ್ನು ಪಾವತಿಸಬೇಕಿರುತ್ತದೆ. ಈ ಸಂಬಂಧ, 2025–26 ಮತ್ತು 2026–27ನೇ ಸಾಲಿನ ಸಂಬಂಧ, ಜುಲೈ–2026ರ ಮಾಹೆವರೆಗೆ ಮಾತ್ರ ರೂ. 35,42,148–77 (ಮೂವತ್ತೈದು ಲಕ್ಷದ ನಲವತ್ತೆರಡು ಸಾವಿರದ ಒಂದುನೂರ ನಲವತ್ತೆಂಟು ರೂಪಾಯಿಗಳು ಮತ್ತು ಎಪ್ಪತ್ತೇಳು ಪೈಸೆ ಮಾತ್ರ) ಗಳ ವ್ಯತ್ಯಾಸದ ಮೊತ್ತವನ್ನು ಸಂಬಂಧಿಸಿದ ಕಾರ್ಮಿಕರಿಗೆ ಆಯಾ ಏಜೆನ್ಸಿ ಮುಖಾಂತರ ಪಾವತಿಸಲು ಹಾಗೂ ದಿನಾಂಕ:01.08.2026 ರಿಂದ ಅನ್ವಯವಾಗುವಂತೆ ಪರಿಷ್ಕೃತ ವೇತನವನ್ನು ನಿಯಮಾನುಸಾರ ಪಾವತಿಸಲು ಅಗತ್ಯ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.</td></tr>
<tr><td>15.</td><td>2026–27:ಸಾ.ಸಿಂ–02<br>ಇ.ವಿ–02</td><td>ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಮಾನವ ಸಂಪನ್ಮೂಲ, ಸ್ವಚ್ಚತಾ ಮತ್ತು ಭದ್ರತಾ ಸೇವೆಗಳನ್ನು ಒದಗಿಸುವ ಟೆಂಡರ್‌ನ್ನು ಅಖೈರುಗೊಳಿಸುವ ಕುರಿತು.</td></tr>
<tr><td></td><td colspan="2"><u>ನಿರ್ಣಯ:</u><br>ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಮಾನವ ಸಂಪನ್ಮೂಲ, ಸ್ವಚ್ಚತಾ ಮತ್ತು ಭದ್ರತಾ ಸೇವೆಗಳನ್ನು ಒದಗಿಸುವ ಟೆಂಡರ್‌ನ್ನು ಅಖೈರುಗೊಳಿಸುವ ಕುರಿತು ಚರ್ಚಿಸಿದ ಸಭೆಯು ಈ ಸಂಬಂಧ, ಟೆಂಡರ್ ಮೌಲ್ಯಮಾಪನ ಸಮಿತಿಯನ್ನು ಮರುಪರಿಷ್ಕರಿಸಲು ಹಾಗೂ 07 ದಿನಗಳ ಅಲ್ಪಾವಧಿ ಮರು ಟೆಂಡರ್‌ಅನ್ನು ಆಹ್ವಾನಿಸಿ, ತುರ್ತಾಗಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br>ಮುಂದುವರೆದು, ಸದರಿ ಟೆಂಡರ್ ಮೌಲ್ಯಮಾಪನಾ ಸಮಿತಿಯನ್ನು ಪರಿಷ್ಕರಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಭೆಯು ಅನುಮೋದಿಸಿತು.</td></tr>
<tr><td colspan="3" align="center">ಪೂರಕ ಕಾರ್ಯಸೂಚಿಗಳು (ಟೇಬಲ್ ಅಜೆಂಡಾ)</td></tr>
<tr><td colspan="3" align="center">ಸಿಬ್ಬಂದಿ ವಿಭಾಗ</td></tr>
<tr><td>16.</td><td>2026–27:ಸಾ.ಸಿಂ–02<br>ಸಿ.ವಿ–05</td><td>UGC-CAS ಅಡಿಯಲ್ಲಿ ವೃತ್ತಿ ಪದೋನ್ನತಿ ಪ್ರಕ್ರಿಯೆಯನ್ನು ಕೈಗೊಳ್ಳುವ ಕುರಿತು.</td></tr>
<tr><td></td><td colspan="2"><u>ನಿರ್ಣಯ:</u><br>ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, UGC-CAS ಅಡಿಯಲ್ಲಿ ವೃತ್ತಿ ಪದೋನ್ನತಿ ಪ್ರಕ್ರಿಯೆಯನ್ನು ನಿಯಮಾನುಸಾರ ಕೈಗೊಳ್ಳಲು ಅನುಮತಿಸಿತು ಹಾಗೂ ಈ ಕುರಿತು ಪ್ರಕ್ರಿಯೆಯನ್ನು ಪ್ರಾರಂಭಿಸಲು ಸರ್ಕಾರಕ್ಕೆ ಅನುಮತಿಗಾಗಿ ಪತ್ರಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.</td></tr>
</table>

| | | |
|---|---|---|
| 17. | **2026-27:ಸಾ.ಸಿಂ-02 ಸಿ.ವಿ-06** | **ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಕುಲಸಚಿವರು (ಮೌಲ್ಯಮಾಪನ) ಹುದ್ದೆಗೆ ನೇಮಕಗೊಂಡ ಹಿನ್ನೆಲೆಯಲ್ಲಿ ಪ್ರೊ. ಅಶ್ವಿನಿ, ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ಇವರನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಿರುವ ಕುರಿತು.** |
| | <u>ನಿರ್ಣಯ:</u><br>ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 169 ಯುಜಿವಿ 2026, ದಿನಾಂಕ: 07.09.2026ರಲ್ಲಿ ಪ್ರೊ. ಅಶ್ವಿನಿ, ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ಇವರನ್ನು ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಕುಲಸಚಿವರು (ಮೌಲ್ಯಮಾಪನ) ಹುದ್ದೆಗೆ ನೇಮಕ ಮಾಡಿ ಆದೇಶ ಹೊರಡಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಸೂಚನೆಯನ್ವಯ ಪ್ರೊ. ಅಶ್ವಿನಿ, ಇವರನ್ನು ಪ್ರಾಧ್ಯಾಪಕರ ಹುದ್ದೆಯ ಸೇವೆಯಿಂದ ದಿನಾಂಕ:08.09.2026ರಂದು ಅಪರಾಹ್ನ ಬಿಡುಗಡೆಗೊಳಿಸಿ, ಆದೇಶ ಹೊರಡಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. | |

**<u>ಕಾರ್ಯಸೂಚಿ ಹೊರತಾಗಿ ಚರ್ಚಿಸಿದ ಇತರೆ ವಿಷಯಗಳು</u>**

ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ.) ಅಡಿಯಲ್ಲಿ ಸ್ನಾತಕ ಪದವಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳ ಪದವಿ ವ್ಯಾಸಂಗದ ಅವಧಿಯು ಪೂರ್ಣಗೊಂಡಿದ್ದು, ಕೆಲವು ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದು, ಸದರಿ ವಿದ್ಯಾರ್ಥಿಗಳಿಗೆ ಒಂದು ಬಾರಿಯ ಅವಕಾಶವಾಗಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡುವಂತೆ ಮಾನ್ಯ ಕುಲಸಚಿವರು (ಪರೀಕ್ಷಾಂಗ) ಇವರು ಸಭೆಯ ಗಮನಕ್ಕೆ ತಂದರು.

ಈ ಸಂಬಂಧ, ಕೂಲಂಕಷವಾಗಿ ಚರ್ಚಿಸಿದ ಸಭೆಯು (ಎನ್.ಇ.ಪಿ.) ಅಡಿಯಲ್ಲಿ ವ್ಯಾಸಂಗ ಮಾಡಿ ವ್ಯಾಸಂಗದ ಅವಧಿಯು ಪೂರ್ಣಗೊಂಡಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಒಂದು ಬಾರಿಯ ಅವಕಾಶವಾಗಿ ಪರೀಕ್ಷೆಗೆ ಅವಕಾಶ ನೀಡಲು ಸಿಂಡಿಕೇಟ್ ಸಭೆಯು ಅನುಮತಿಸಿತು.

| | | | |
|---|---|---|---|
| ಶ್ರೀ ತಿಪ್ಪೇಸ್ವಾಮಿ ಹೆಚ್. | [signature] | ಶ್ರೀಮತಿ ಪ್ರಿಯದರ್ಶಿನಿ. ಆರ್. | Priyadarshini R |
| ಪ್ರೊ. ನಾಗಭೂಷಣ ಹೆಚ್.<br>ಡೀನರು, ವಿಜ್ಞಾನ & ತಂತ್ರಜ್ಞಾನ ನಿಕಾಯ | [signature] | ಶ್ರೀ ಹೆಚ್.ಎಸ್ ಅಶೋಕ | [signature] |
| ಡಾ. ಸುದರ್ಶನ ರೆಡ್ಡಿ, ಹಿರಿಯ ಪ್ರಾಧ್ಯಾಪಕರು | [signature] | ಡಾ. ಫರ್‌ಹಾನಾ ಬೇಗಂ | [signature] |
| ಶ್ರೀ ವೀರಣ್ಣ. ಎಸ್.ಸಿ, ಪ್ರಾಂಶುಪಾಲರು | [signature] | ಶ್ರೀ ಶಿವಣ್ಣ ಎಂ.ಜೆ. | |
| ಪ್ರೊ. ಕುಮಾರ್ ಕೆ.ಎಸ್., ಪ್ರಾಂಶುಪಾಲರು | | ಶ್ರೀ ಮನೋಜ್ ಹೆಚ್.ಆರ್. | [signature] |
| ಡಾ. ಜ್ಯೋತಿ ಎಂ.ಜಿ., ಪ್ರಾಂಶುಪಾಲರು | Jyothi MG | ಡಾ. ಎಂ.ಎಸ್ ಪ್ರಕಾಶ್. | [signature] |
| ಡಾ. ಪುಟ್ಟರಾಜು ಆರ್.<br>ಪ್ರಾಂಶುಪಾಲರು | [signature] | ಡಾ. ಮೋಹನ ಹೆಚ್.ಎಸ್<br>ಕುಲಸಚಿವರು (ಮೌಲ್ಯಮಾಪನ) | [signature] |
| | | ಶ್ರೀ ನರಸಿಂಹಮೂರ್ತಿ<br>ಹಣಕಾಸು ಅಧಿಕಾರಿಗಳು | |

[signature]
ಮಾನ್ಯ ಕುಲಸಚಿವರು
ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

[signature]
ಮಾನ್ಯ ಕುಲಪತಿಗಳು (ಪ್ರ)
ಕುಲಪತಿಗಳು
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು.